## ಕರ್ನಾಟಕ ಸರ್ಕಾರ

ಸಂಖ್ಯೆ: ಕೃಇ 238 ಕೃಪಸೇ 2009.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:03–08–2012.

## ಅಧಿಸೂಚನೆ

ಕೃಷಿ ಇಲಾಖೆಯಲ್ಲಿ ಖಾಲಿಯಿರುವ ಬಿ-ಗುಂಪಿನ ಸಹಾಯಕ ಕೃಷಿ ಅಧಿಕಾರಿ (ಕೃಷಿ ಇಂಜಿನಿಯರಿಂಗ್ ಮತ್ತು ನೀರು ನಿರ್ವಹಣೆ) ಗಳ ಹುದ್ದೆಗಳನ್ನು ಕರ್ನಾಟಕ ಕೃಷಿ ಸೇವೆಗಳು (ನೇಮಕಾತಿ) ನಿಯಮಗಳು 1999 ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃತೋಇ 238 ಕೃಪಸೇ 2009, ದಿನಾಂಕ: 26–10–2011 ರಲ್ಲಿ ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಅನುಬಂಧ-1 ರಲ್ಲಿ ಕಾಣಿಸಿರುವಂತೆ, ವೇತನ ಶ್ರೇಣಿ ರೂ. 21,600–600–24,600–700–28,800–800–33,600–900–39,000–1050–40,050 ರಲ್ಲಿ ಸಹಾಯಕ ಕೃಷಿ ಅಧಿಕಾರಿ (ಕೃಷಿ ಇಂಜಿನಿಯರಿಂಗ್ ಮತ್ತು ನೀರು ನಿರ್ವಹಣೆ)ಗಳ ಹುದ್ದೆಗೆ ಎರಡು ವರ್ಷಗಳ ಖಾಯಂಪೂರ್ವ ಸೇವಾವಧಿಗೆ ಒಳಪಟ್ಟು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ನೇಮಕಾತಿ ಮಾಡಲಾಗಿದೆ.

1. ಈ ನೇಮಕಾತಿಯು ಅಭ್ಯರ್ಥಿಯ ವೈದ್ಯಕೀಯ ದೃಢತೆ ಪ್ರಮಾಣ ಪತ್ರ, ಪೂರ್ವಪರ ನಡವಳಿಕೆಯ ಬಗ್ಗೆ ಪೊಲೀಸ್ ವರದಿ ಮತ್ತು ಜಾತಿ ಹಾಗೂ ಆದಾಯ ಸಿಂಧುತ್ವ ಪ್ರಮಾಣ ಪತ್ರ ತನಿಖೆಗೆ ಒಳಪಟ್ಟಿರುತ್ತದೆ.

2. ಅಭ್ಯರ್ಥಿಗಳ ನೇಮಕಾತಿಯು ತಾತ್ಕಾಲಿಕವಾಗಿದ್ದು, ಅವರ ನೇಮಕಾತಿ ಹಾಗೂ ಸೇವಾ ಷರತ್ತುಗಳು ಆಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರಿ ಆದೇಶಗಳು/ಕಾಲಕಾಲಕ್ಕೆ ಹೊರಡಿಸಲ್ಪಡುವ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31–03–2006ರ ಅನ್ವಯ ನಿಗಧಿತ ವಂತಿಗೆ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತದೆ.

3. ನೇಮಕಾತಿ ಹೊಂದಿದ ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವೆಗಳು (ಪರೀಕ್ಷಾರ್ಥ) ನಿಯಮಗಳು 1977ಕ್ಕೆ ಬದ್ಧರಾಗಿರುತ್ತಾರೆ.

4. ನೇಮಕಾತಿಗೊಂಡ ಅಭ್ಯರ್ಥಿಗಳು ಪರೀಕ್ಷಾರ್ಥ ಅವಧಿಯಲ್ಲಿ (Probationary Period) ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಾವಳಿ 1974 ರನ್ವಯ ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳು ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.

5. ಅಭ್ಯರ್ಥಿಗಳ ಜೇಷ್ಠತೆಯು ಕರ್ನಾಟಕ ನಾಗರೀಕ ಸೇವಾ (ಸೇವಾ ಹಿರಿತನ) ನಿಯಮಗಳು 1957 ರಲ್ಲಿನ ನಿಯಮ-5 ರನ್ವಯ ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಆದೇಶಗಳಿಗೆ ಒಳಪಟ್ಟಿರುತ್ತದೆ.

24

6. ಆಯ್ಕೆಯಾದ ಅಭ್ಯರ್ಥಿಗಳಲ್ಲಿ ನೌಕರಿಗೆ ಹಾಜರಾಗಲು ಇಚ್ಛೆಯಿಲ್ಲವೆಂದು ವ್ಯಕ್ತಪಡಿಸಿದ ಒಬ್ಬರನ್ನು ಮತ್ತು ಸಿಂಧುತ್ವ ಪ್ರಮಾಣ ಪತ್ರ ಸ್ವೀಕೃತವಾಗದ ಒಬ್ಬ ಅಭ್ಯರ್ಥಿಯನ್ನು ಹೊರತುಪಡಿಸಿ ಉಳಿದವರಿಗೆ ನೇಮಕಾತಿ ನೀಡಲಾಗಿದೆ.

7. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 9 ಎಸ್‌ಆರ್‌ಎಸ್ 93, ದಿನಾಂಕ: 18-11-1993 ರಲ್ಲಿರುವಂತೆ ನೇಮಕಾತಿ ಮಾಡಿದ ನಂತರ ನೇಮಕಾತಿ ಹೊಂದಿದ ಅಭ್ಯರ್ಥಿಗಳು ತಮ್ಮ ಪರೀಕ್ಷಾರ್ಥ ಅವಧಿಯಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳಲು / ಉನ್ನತ ವ್ಯಾಸಂಗ ಮುಂದುವರಿಸಲು ಅವಕಾಶವಿರುವುದಿಲ್ಲ.

8. ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಮೂಲ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ, ಜನ್ಮ ದಿನಾಂಕ ಧೃಡೀಕರಣ ಪತ್ರ/ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಮೀಸಲಾತಿ ಪ್ರಮಾಣ ಪತ್ರ ಹಾಗೂ ಇತರೆ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು ಮತ್ತು ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಗುಣ-ನಡತೆ ಪ್ರಮಾಣ ಪತ್ರಗಳನ್ನು ಇತ್ತೀಚಿನ ಭಾವಚಿತ್ರದೊಂದಿಗೆ ಒದಗಿಸತಕ್ಕದ್ದು.

9. ಅಭ್ಯರ್ಥಿಗಳು ಈ ಅಧಿಸೂಚನೆಯನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ದಿನಾಂಕದಿಂದ ಅನುಬಂಧ-1ರಲ್ಲಿ ತಿಳಿಸಿರುವಂತೆ ನೇಮಕಗೊಂಡ ಸಂಬಂಧಿಸಿದ ಕಛೇರಿ ಮುಖ್ಯಸ್ಥರಲ್ಲಿ 15 ದಿವಸಗಳ ಒಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಹಾಜರಾಗತಕ್ಕದ್ದು. ನಿಗದಿತ ದಿನಾಂಕದೊಳಗಾಗಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ನೇಮಕಾತಿ ಆದೇಶವು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 18 (3) ರನ್ವಯ ಯಾವುದೇ ಮುನ್ಸೂಚನೆ ಇಲ್ಲದೆ ತಂತಾನೆ ರದ್ದಾಗುತ್ತದೆ.

10. ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಾಗ ಸರ್ಕಾರಿ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ (Government District Medical Board) ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

11. ಮೀಸಲಾತಿ ಆಧಾರದ ಮೇಲೆ ಆಯ್ಕೆಯಾಗಿರುವ ಎಲ್ಲಾ ಅಭ್ಯರ್ಥಿಗಳು ಅವರುಗಳಿಗೆ ಸಂಬಂಧಿಸಿದಂತೆ ಇದರೊಂದಿಗೆ ಅನುಬಂಧ- 2 ರಲ್ಲಿ ಲಗತ್ತಿಸಿರುವ ಅಫಿಡೆವಿಟ್ ನಮೂನೆಯಲ್ಲಿ ಕನಿಷ್ಠ ರೂ. 20/- ಮೌಲ್ಯದ ಅಥವಾ ಲಭ್ಯವಿರುವ ಛಾಪಾ ಕಾಗದದ ಮೇಲೆ (Document sheet) ಮ್ಯಾಜಿಸ್ಟ್ರೇಟ್/ನೋಟರಿರವರ ಸಮ್ಮುಖದಲ್ಲಿ ಪಡೆದ ಪ್ರಮಾಣ ಪತ್ರವನ್ನು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಮೀಸಲಾತಿಗೆ ಸಂಬಂಧಿಸಿದಂತೆ ಲೋಪದೋಷಗಳು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಮುನ್ಸೂಚನೆಯಿಲ್ಲದೇ ರದ್ದುಗೊಳಿಸಲಾಗುವುದು.

12. ಎಲ್ಲಾ ಅಭ್ಯರ್ಥಿಗಳ ಬಗ್ಗೆ ಚಾರಿತ್ರ್ಯ ನಡತೆ ಕುರಿತು ಜಿಲ್ಲಾ ಪೊಲೀಸ್ ಅಧೀಕ್ಷಕರಿಂದ ಪಡೆದ ಪರಿಶೀಲನಾ ವರದಿಯಲ್ಲಿ ನೇಮಕಾತಿ ಮಾಡಿರುವ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಮುನ್ಸೂಚನೆಯಿಲ್ಲದೆ ರದ್ದುಗೊಳಿಸಲಾಗುವುದು.

13. ಅಭ್ಯರ್ಥಿಗಳು ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಕನಿಷ್ಠ ರೂ. 20/- ಮೌಲ್ಯದ ಅಥವಾ ಲಭ್ಯವಿರುವ ಛಾಪಾ ಕಾಗದದಲ್ಲಿ (Document sheet) ಅನುಬಂಧ-3ರಲ್ಲಿ ಲಗತ್ತಿಸಿರುವಂತೆ ವಚನಬದ್ಧ ಪ್ರಮಾಣ ಪತ್ರವನ್ನು ಬರೆದುಕೊಡತಕ್ಕದ್ದು.

14. ಅಭ್ಯರ್ಥಿಯು ನೇಮಕಾತಿ ಕೋರಿ ಸಲ್ಲಿಸಿರುವ / ಸಲ್ಲಿಸುವ ದಾಖಲೆಗಳಲ್ಲಿ ಯಾವುದಾದರೂ ಕೃತ್ರಿಮವೆಂದು, ಅಸತ್ಯವೆಂದು ಕಂಡುಬಂದಲ್ಲಿ ಮತ್ತು ಅಭ್ಯರ್ಥಿಯು ತಪ್ಪು ಮಾಹಿತಿಯನ್ನು ನೀಡಿದ್ದಾನೆಂದು, ನೇಮಕಾತಿಯ ನಂತರ ಯಾವುದೇ ಸಮಯದಲ್ಲಿ ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯನ್ನು ಯಾವುದೇ ಮುನ್ಸೂಚನೆ ನೀಡದೇ ಸೇವೆಯಿಂದ ತೆಗೆದುಹಾಕಲಾಗುವುದು. ಜೊತೆಗೆ ದಂಡನ ವಿಧಿಸುವ ಬಗ್ಗೆ ಕೂಡ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ

ಸಂಕಲನಕಾರರು. ಕರ್ನಾಟಕ ರಾಜ್ಯ ಪತ್ರ. ಕಂಗೇರಿ ಹೊರವಲಯ ಮುದ್ರಣಾಲಯ. ಬೆಂಗಳೂರು-ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ. (ಪ್ರಕಟನೆಯ ನಂತರ 100 ಪ್ರತಿಗಳನ್ನು ಒದಗಿಸುವುದು)

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ:-**

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.

--4--

5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ. ವಿಕಾಸಸೌಧ, ಬೆಂಗಳೂರು.
6. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಕೃಷಿ ಆಯುಕ್ತರ ಮೂಲಕ)
7. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ. (ಕೃಷಿ ಆಯುಕ್ತರ ಮೂಲಕ)
8. ಸಂಬಂಧಿಸಿದ ಎಲ್ಲಾ ಕಛೇರಿಗಳ ಮುಖ್ಯಸ್ಥರಿಗೆ ಕಳುಹಿಸುತ್ತಾ ತಮ್ಮ ಅಧೀನಕ್ಕೆ ನೇಮಕಾತಿ ಮಾಡಿದ ಅಭ್ಯರ್ಥಿಯನ್ನು ಹಾಜರುಪಡಿಸಿಕೊಂಡ ಕೂಡಲೇ ಆಯುಕ್ತರು, ಕೃಷಿ ಇಲಾಖೆ ಮತ್ತು ಸರ್ಕಾರಕ್ಕೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ. (ಕೃಷಿ ಆಯುಕ್ತರ ಮೂಲಕ)
9. ಸಂಬಂಧಪಟ್ಟ ಅಭ್ಯರ್ಥಿಗಳಿಗೆ (ಕೃಷಿ ಆಯುಕ್ತರ ಮೂಲಕ)
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ
11. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರುಗಳಿಗೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ - 1

(ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃಇ 238 ಕೃಇಸೇ 2009, ದಿನಾಂಕ:03-08-2012)

| ಕ್ರಮ ಸಂಖ್ಯೆ | ಆಯ್ಕೆ ಪಟ್ಟಿ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಜನ್ಮ ದಿನಾಂಕ | ನೇಮಕಾತಿ ಹೊಂದಿದ ಪ್ರವರ್ಗ | ನೇಮಕಾತಿ ಮಾಡಿದ ಸ್ಥಳ |
|---|---|---|---|---|---|
| 1 | 1 | ಸತೀಶ್ ಎಂ S/o ವಿ.ಎಂ. ಮುನಿಯಪ್ಪ, ನಂ.176, ಬಿ.ಟಿ. ಎಸ್. ಲೇಔಟ್, ಐ.ಐ.ಎಂ.ಬಿ. ಪೋಸ್ಟ್, ಅರಕೆರೆ, ಬಿ.ಜಿ.ರೋಡ್ ಬೆಂಗಳೂರು-560076 | 20/12/1978 | ಜಿ.ಎಂ-ಇತರ | ರೈತ ಸಂಪರ್ಕ ಕೇಂದ್ರ -ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ. |
| 2 | 2 | ಉಮೇಶ, ಹೊರೆಹಳ್ಳಿ, ಮಡೇನಹಳ್ಳಿ ಪೋಸ್ಟ್, ಕಸಬಾ ಹೋಬಳಿ,ಗುಬ್ಬಿ, ತುಮಕೂರು- 572216 | 12/03/1980 | ಜಿ.ಎಂ-ಗ್ರಾ | ರೈತ ಸಂಪರ್ಕ ಕೇಂದ್ರ - ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ. |
| 3 | 3 | ಸಿದ್ದನಗೌಡ ಯಡಚಿ, S/o ಗದ್ದೆಪ್ಪ ಯಡಚಿ, ಹೊಸಹಳ್ಳಿ ಪೋಸ್ಟ್, ಇಂಗಲಗುಂದಿ ಹಿರೇಕೆರೂರು, ಹಾವೇರಿ- 581111 | 13/12/1986 | ಜಿ.ಎಂ.ಗ್ರಾ | ರೈತ ಸಂಪರ್ಕ ಕೇಂದ್ರ - ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಸಿಂಧನೂರು, ತಾಲ್ಲೂಕು, ರಾಯಚೂರು ಜಿಲ್ಲೆ. |
| 4 | 4 | ವಿಜಯಕುಮಾರ, ವಿ.ವಿ.ಮೇಗೇರಿ, ಎನ್ ಡಬ್ಲ್ಯೂ.ಕೆ.ಆರ್.ಟಿ.ಸಿ, ಡಿಪೋ, ರೋಣ, ಗದಗ- 582209 | 13/08/1974 | ಜಿ.ಎಂ-ಕೆಎಂ | ರೈತ ಸಂಪರ್ಕ ಕೇಂದ್ರ - ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರೋಣ ತಾಲ್ಲೂಕು, ಗದಗ ಜಿಲ್ಲೆ. |
| 5 | 5 | ಮಹೇಶ ಕುಮಾರ ಎಂ S/o ಮುನಿಸ್ವಾಮಿ ಜಿ.ಎಂ. 4ನೇ ಕ್ರಾಸ್, ಜಯನಗರ, ಕೋಲಾರ-563101 | 20/12/1978 | ಜಿ.ಎಂ.-ಇತರೆ | ರೈತ ಸಂಪರ್ಕ ಕೇಂದ್ರ, - ಕೊಣನೂರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ. |

-- 2

| | | | | | |
|---|---|---|---|---|---|
| 6 | 6 | ವೀರೇಶ್ ಜೆ.ಎಂ., ನಂ.44/45, ಶಿಲ್ಪರಾಶಿ, ಎಂ.ಹೆಚ್. ಆರ್. ಸರ್ಕಲ್, ಸಿಲಿಕಾನ್ ಹತ್ತಿರ, ಕಿರ್ಲೋಸ್ಕರ್ ಲೇಔಟ್ ಹಿಂಬಾಗ, ಬೆಂಗಳೂರು ಉತ್ತರ, ಬೆಂಗಳೂರು-560073 | 07/03/1980 | ಜಿ.ಎಂ. ಇತರೆ | ರೈತ ಸಂಪರ್ಕ ಕೇಂದ್ರ - ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ. |
| 7 | 7 | ಗಿರಿಜ D/o ಕಳಕಪ್ಪ ಎ.ಅಂಗಡಿ, ಕರಮುಡಿ ಪೋಸ್ಟ್, ಯಲಬುರ್ಗಾ, ಕೊಪ್ಪಳ-583231. | 01/06/1986 | ಜಿ.ಎಂ. ಮಹಿಳೆ | ರೈತ ಸಂಪರ್ಕ ಕೇಂದ್ರ - ಕುಕನೂರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ. |
| 8 | 8 | ನಾಗರಾಜ ಕೆ. C/o ಮಲ್ಲಿಕಾರ್ಜುನ ಕೊಟಗಿ, ಕೆ.ಬಸಣ್ಣ ಅಂಡ್ ಕಂಪನಿ ಮುಖ್ಯ ರಸ್ತೆ, ಹಳೇ ಬಸ್ ನಿಲ್ದಾಣ, ಕರಟಗಿ ಪೋಸ್ಟ್, ಗಂಗಾವತಿ, ಕೊಪ್ಪಳ-583229. | 17/10/1979 | ಜಿ.ಎಂ-ಗ್ರಾ | ರೈತ ಸಂಪರ್ಕ ಕೇಂದ್ರ- ಮರಳಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ. |
| 9 | 9 | ರಾಜೇಶ ಕೆ. S/o ಕೃಷ್ಣೇಗೌಡ ಹೆಚ್, ದೊಡ್ಡನಹಳ್ಳಿ,(ವಿ) ಶಾಪುರ ಪೋಸ್ಟ್, ಕೋಲಾರ-563101. | 15/06/1984 | ಜಿ.ಎಂ. ಇತರೆ | ರೈತ ಸಂಪರ್ಕ ಕೇಂದ್ರ- ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆ. |
| 10 | 10 | ಸಂತೋಷ ಬಡ್ಡಿಯವರ್ S/o ಸಿದ್ದಪ್ಪ ಬಡ್ಡಿಯವರ್, ಅನೂರು ಪೋಸ್ಟ್, ಬಿಸ್ಲಹಳ್ಳಿ, ಬ್ಯಾಡಗಿ, ಹಾವೇರಿ-581110 | 25/05/1986 | ಜಿ.ಎಂ-ಗ್ರಾ | ರೈತ ಸಂಪರ್ಕ ಕೇಂದ್ರ - ಅಕ್ಕಿಆಲೂರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ |
| 11 | 11 | ಮಹೇಶ ಎಂ, ನಂ.79/78, 3ನೇ ರಸ್ತೆ, 10ನೇ ಕ್ರಾಸ್, ಸುಭಾಷ್ ನಗರ, ನೆಲಮಂಗಲ, ಬೆಂಗಳೂರು ಗ್ರಾಮಾಂತರ-562123 | 18/09/1980 | ಜಿ.ಎಂ- ಇತರೆ | ರೈತ ಸಂಪರ್ಕ ಕೇಂದ್ರ- ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ., |

| | | | | | |
|---|---|---|---|---|---|
| 12 | 12 | ಶಿಲ್ಪ ಕುಲಕರ್ಣಿ, ಮನೆ ನಂ.3-4-184-196, ಫ್ಲಾಟ್ ನಂ.401, [illegible] ಅಪಾರ್ಟ್‌ಮೆಂಟ್, ಲಿಂಗಂಪಲ್ಲಿ ಕ್ರಾಸ್ ರೋಡ್, ರಾಘವೇಂದ್ರ ಸ್ವಾಮಿ ದೇವಸ್ಥಾನದ ಪಕ್ಕ ಕಾಚಿಗುಡ, ಹೈದರಾಬಾದ್, ಆಂಧ್ರಪ್ರದೇಶ-500027. | 24/03/1984 | ಜಿ.ಎಂ.-ಮಹಿಳೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಸೌದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| 13 | 13 | ಅರುಣ ಕಾಡ್ಲಿ, ಯಮಕನಮರಡಿ ಪೋಸ್ಟ್, ಚಿಟ್ಟಿಗಲ್ಲಿ, ಹುಕ್ಕೇರಿ, ಬೆಳಗಾಂ-591245 | 04/07/1977 | 3ಬಿ-ಇತರೆ | ರೈತ ಸಂಪರ್ಕ ಕೇಂದ್ರ ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| 14 | 14 | ಸತ್ಯನಾರಾಯಣ ವೈ, ಮನೆ ನಂ.ಎ-44, ಸಂಪಿಗೆ ರಸ್ತೆ, ಕುವೆಂಪು ನಗರ, ಕರೇಕಲ್ಲಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ-561208. | 24/12/1978 | ಸಿ1-ಇತರೆ | ರೈತ ಸಂಪರ್ಕ ಕೇಂದ್ರ-ಕೊಡಿಗೇನಹಳ್ಳಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ. |
| 15 | 15 | ನೇಹಾ ಕುಲಕರ್ಣಿ, ಮನೆ ನಂ.7-5-41, ಜವಹರ್ ನಗರ, ರಾಯಚೂರು-584103 | 06/10/1988 | ಜಿ.ಎಂ.-ಮಹಿಳೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ |
| 16 | 16 | ಕರಣ್‌ಕುಮಾರ, S/o ಅಶೋಕ ಆರ್.ಪಾವನೂರು, ಸುಭಾಷ್ ಚೌಕ್, ಬಾಲಾಜಿ ದೇವಸ್ಥಾನ ರಸ್ತೆ, ಶಹಬಾದ್, ಚಿತ್ತಾಪುರ, ಗುಲ್ಬರ್ಗಾ-585228 | 15/04/1987 | ಎಸ್.ಸಿ.-ಇತರೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ, |
| 17 | 18 | ರಘುಪತಿ ಸಿ.ಜೆ. S/o ಜಯಣ್ಣ ಎಸ್, ನಂ.8,ಬಸ್ ನಿಲ್ದಾಣದ ಹತ್ತಿರ, ಚಲ್ಯ ಪೋಸ್ಟ್, ಶ್ರವಣಬೆಳಗೊಳ, ಚೆನ್ನರಾಯಪಟ್ಟಣ,ಹಾಸನ-573135 | 08/12/1983 | 3ಎ-ಇತರೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ. |

| | | | | | |
|---|---|---|---|---|---|
| 18 | 19 | ಶೋಭಾ ದೇಶ್. D/o ಚೆನ್ನಮಲ್ಲಪ್ಪ, 20ನೇ ವಾರ್ಡ್, ಎಸ್.ಎಸ್.ನಗರ, ಸಿರಗುಪ್ಪ, ಬಳ್ಳಾರಿ-583121 | 07/09/1984 | ಜಿ.ಎಂ-ಮಹಿಳೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ. |
| 19 | 20 | ಮೊಹಮ್ಮದ್ ಗೇಸುದಾ ರಾಜ್ ಕೊಟ್ಟೇರೇಶ್ವರ ಹಾಲಿನ ಡೈರಿ ಹಿಂಬಾಗ, ವಿಜಯನಗರ ಕಾಲೋನಿ. ಗಂಗಾವತಿ, ಕೊಪ್ಪಳ-583227 | 08/07/1988 | 2ಬಿ-ಇತರ | ರೈತ ಸಂಪರ್ಕ ಕೇಂದ್ರ-ಹಿಟ್ನಾಳ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕೊಪ್ಪಳ ತಾಲ್ಲೂಕು. |
| 20 | 21 | ಪವನಕುಮಾರ, ಮನೆ ನಂ.10-109, ಸಿದ್ದಾರ್ಥ ಚೌಕ,ಬ್ರಹ್ಮಪುರ,ಗುಲ್ಬರ್ಗಾ-585103 | 14/09/1988 | ಎಸ್.ಸಿ-ಇತರೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜೇವರ್ಗಿ ತಾಲ್ಲೂಕು. ಗುಲ್ಬರ್ಗಾ ಜಿಲ್ಲೆ. |
| 21 | 22 | ಅಂಬಿಕಾ ಮಹೇಂದ್ರಕರ್, D/o ರಮಾಕಾಂತ ಮಹೇಂದ್ರಕರ್, ಮನೆ ನಂ.3-82, ಮೈನ್ ಬಜಾರ್,ಸುಳೇಪೇಟ್,ಚಿಂಚೋಳಿ, ಗುಲ್ಬರ್ಗಾ-585324. | 21/07/1982 | 2ಎ-ಮಹಿಳೆ | ರೈತ ಸಂಪರ್ಕ ಕೇಂದ್ರ-ಔರಾದ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗುಲ್ಬರ್ಗಾ ತಾಲ್ಲೂಕು. |
| 22 | 23 | ವೀರಪ್ಪನವರ ರಾಘವೇಂದ್ರ, S/o. ತಿರುಕಪ್ಪ, ಕೊಳಲು ಪೋಸ್ಟ್, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ-583217. | 01/06/1986 | ಎಸ್.ಟಿ. ಇತರೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. |
| 23 | 24 | ಮಧುಕಾಂತಿ, ಮನೆ ನಂ. 1-11-43/6, ಶಿವನಿಲಯ, ದೇವರ ಕಾಲೋನಿ, ಮಥೋಡಿಸ್ಟ್ ಚರ್ಚ್ ಹತ್ತಿರ ರಾಯಚೂರು-584101. | 09/08/1988 | 2ಎ-ಇತರೆ | ರೈತ ಸಂಪರ್ಕ ಕೇಂದ್ರ-ಕಲ್ಮಲ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ತಾಲ್ಲೂಕು. |

| | | | | | |
|---|---|---|---|---|---|
| 24 | 25 | ರಾಘವನ್ ಆರ್.ವಿ.<br>ನಂ.08, ನ್ಯೂ ಟ್ಯಾಂಕ್ ರೋಡ್,<br>ಆರ್.ಪಿ.ಲೇಔಟ್, ಮಾರುತಿ ಎಕ್ಸ್‌ಟೆಕ್ಷನ್, ಮಾಲೂರು,<br>ಕೋಲಾರ-563130, | 20/12/1979 | 2ಎ-ಗ್ರಾ | ರೈತ ಸಂಪರ್ಕ ಕೇಂದ್ರ-ಸಾಲಿಗ್ರಾಮ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ. |
| 25 | 26 | ಬಸವರಾಜ ಸಜ್ಜನ್<br>S/o ವೈ.ಎಸ್. ಸಜ್ಜನ್,<br>ಮನಗುಳಿ ಪೋಸ್ಟ್,<br>ಬಸವನಬಾಗೇವಾಡಿ,<br>ಬಿಜಾಪುರ-586122. | 10/06/1987 | 2ಎ-ಇತರ | ರೈತ ಸಂಪರ್ಕ ಕೇಂದ್ರ-ಯಡ್ರಾಮಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜೇವರ್ಗಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ. |
| 26 | 28 | ಗೀತಾಂಜಲಿ,<br>D/o ಕೆಂಚಪ್ಪ,<br>8-2-28, ಇಕ್ಬಾಲ ನಗರ,<br>ಹರಿಜನವಾಡ, ರಾಯಚೂರು-584101 | 06/02/1989 | ಎಸ್.ಸಿ. ಮಹಿಳೆ | ರೈತ ಸಂಪರ್ಕ ಕೇಂದ್ರ-ಯರಗೇರಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ತಾಲ್ಲೂಕು. |
| 27 | 29 | ವಿಭಾ ಎಸ್.<br>W/o ಗೋವಿಂದರಾಜು,<br>ಕೆ.ಆರ್. ಎಕ್ಸ್‌ಟೆಕ್ಷನ್,<br>ಬೋವಿಕಾಲೋನಿ, ಮಧುಗಿರಿ,<br>ತುಮಕೂರು-572132 | 23/03/1985 | ಎಸ್.ಸಿ. ಮಹಿಳೆ | ರೈತ ಸಂಪರ್ಕ ಕೇಂದ್ರ-ಕಸಬಾ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ. |

[illegible signature] 1/8/12

# ಅನುಬಂಧ-2

## ಅಫಿಡವಿಟ್

ಶ್ರೀ/ಶ್ರೀಮತಿ------------------------------------------ರವರ ಮಗ/ಮಗಳು/ಪತ್ನಿ ------------------------------------ ಆದ ನಾನು ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ ------------------- ಮೀಸಲಾತಿ ಪ್ರವರ್ಗದ ಅಡಿಯಲ್ಲಿ ಆಯ್ಕೆ ಹೊಂದಿರುತ್ತೇನೆ.

ಸಿಂಧುತ್ವ / ದೃಢೀಕರಣ ಪರಿಶೀಲನೆಗೆ ಒಳಪಟ್ಟ ನಂತರದಲ್ಲಿ ಸುಳ್ಳು / ಲೋಪದೋಷಗಳು ವರದಿಯಾದಲ್ಲಿ ಆಯ್ಕೆ ಪ್ರಾಧಿಕಾರವು ಆಯ್ಕೆ ಹೊಂದಿರುವ ನನ್ನ ನೇಮಕಾತಿಯನ್ನು ಮುನ್ಸೂಚನೆ ಇಲ್ಲದೇ ರದ್ದುಪಡಿಸಲು ಯಾವುದೇ ಅಭ್ಯಂತರವಿಲ್ಲವೆಂದು ಈ ಮೂಲಕ ಹೇಳಿಕೆಗೆ ಬದ್ಧನಾಗಿರುತ್ತೇನೆ.

ದಿನಾಂಕ:

ಸಹಿ :

ಹೆಸರು ಮತ್ತು ವಿಳಾಸ :

## ಅನುಬಂಧ–3

# ವಚನಬದ್ಧ ಪ್ರಮಾಣ ಪತ್ರ

ಶ್ರೀ/ಶ್ರೀಮತಿ--------------------------------------ರವರ ಮಗ/ಮಗಳು/ಪತ್ನಿ ---------------------------------- (ವಿಳಾಸದೊಂದಿಗೆ) ಆದ ನಾನು ಈ ಮೂಲಕ ಭಾರತದ ಸಂವಿಧಾನಕ್ಕೆ ಬದ್ಧನಾಗಿರುವುದಾಗಿ ಹಾಗೂ ಸರ್ಕಾರಿ ಸೇವೆಯನ್ನು ನಿಷ್ಠೆಯಿಂದ ಹಾಗೂ ಸೇವಾ ಮನೋಭಾವದಿಂದ ಮಾಡುವುದಾಗಿ ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಮೀಸಲಾತಿ ಪಡೆದಿರುವಲ್ಲಿ ಅಕ್ರಮವೆಂದು ಕಂಡುಬಂದಲ್ಲಿ ನಾನು ನನ್ನ ನೇಮಕಾತಿ ಆದೇಶವನ್ನು ಕಳೆದುಕೊಳ್ಳುವೆನು ಎಂಬುದನ್ನು ಮನಗಂಡು ಪ್ರಮಾಣೀಕರಿಸುತ್ತೇನೆ. ಇದರಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಮುನ್ಸೂಚನೆ ಇಲ್ಲದೇ ಸೇವೆಯಿಂದ ತೆಗೆದುಹಾಕಲು ಯಾವುದೇ ಅಭ್ಯಂತರವಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ:

(ಅಭ್ಯರ್ಥಿಯ ಹೆಸರು ಮತ್ತು ಸಹಿ)

ದಿನಾಂಕ:

ಸಾಕ್ಷಿಗಳು:

1.

2.

ಅಭ್ಯರ್ಥಿಯು ನನ್ನ ಸಮ್ಮುಖದಲ್ಲಿ ಪ್ರಮಾಣ ಮಾಡಿದ್ದಾರೆ ಮತ್ತು ರುಜುವನ್ನು ನಾನು ಗುರುತಿಸಿರುತ್ತೇನೆ.

ಸ್ಥಳ:

(ಕಛೇರಿಯ ಮುಖ್ಯಸ್ಥರ ಸಹಿ ಮತ್ತು ಪದನಾಮ)

ದಿನಾಂಕ:

ANNEXURE-4

I, ---------------------------------------------- declare as under:

* i) That I am unmarried/ a Widow

* ii) That I am married and have only one wife living

*iii) That I am married and have more than one wife living.
Application for grant of exemption is enclosed.

*iv) That I am married and that during the life time of my Spouse
I have contracted another marriage. Application for grant of
Exemption is enclosed.

** 2. I solemnly affirm that the above declaration is true and I understand that in the event of the Declaration being found to be incorrect after my appointment, I shall be liable to be dismissed from service.

Date:

Signature.

NOTE: * Please delete clause not applicable.

** Applicable in case of clauses (i) & (ii) only